**ಕರ್ನಾಟಕ ಸರ್ಕಾರ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ**
**ಆನಂದರಾವ್ ವೃತ್ತ, ಬೆಂಗಳೂರು.-09**

**ಸಂಖ್ಯೆ: ಆಕುಕನಿ/ಆಪ್ರ/207/2019-20** **ದಿನಾಂಕ: 26/03/2020**

# ಸುತ್ತೋಲೆ

**ವಿಷಯ : ಕೋವಿಡ್-19 ರೋಗ ಹರಡದಂತೆ ಶೀಘ್ರ ಪತ್ತೆಗೆ ಸಂಬಂಧಿಸಿದಂತೆ ಜ್ವರ ಪ್ರಕರಣಗಳ ತಪಾಸಣಾ ನಡೆಸುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಕೋವಿಡ್-19 ರೋಗವು ಪಸರಿಸುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯದಲ್ಲಿರುವ (ಬೆಂಗಳೂರು ನಗರ ಹೊರತುಪಡಿಸಿ) ಎಲ್ಲಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಎಲ್ಲಾ ಜ್ವರ ಪ್ರಕರಣಗಳನ್ನು ತಪಾಸಣೆ ನಡೆಸಿ, ಶೀಘ್ರ ಪತ್ತೆ, ರೆಫರಲ್ ಸೇವೆ ಹಾಗೂ ಸೂಕ್ತ ಚಿಕಿತ್ಸೆ ನೀಡುವ ಅವಶ್ಯಕತೆ ಇರುತ್ತದೆ.

ಕೋವಿಡ್-19 ರೋಗವು ಬಹುಮುಖವಾಗಿ ಜ್ವರ, ಕೆಮ್ಮು, ಉಸಿರಾಟದ ತೊಂದರೆ, ಅತಿಸಾರ ಬೇದಿ ಮುಖಾಂತರ ಕಾಣಿಸಿಕೊಳ್ಳುತ್ತಿದ್ದು, ಇದರಲ್ಲಿ ಹೆಚ್ಚಾಗಿ ಜ್ವರ ಪ್ರಕರಣಗಳು ದಾಖಲಾಗುತ್ತಿದೆ, ಈ ಹಿನ್ನಲೆಯಲ್ಲಿ ಮುಂಜಾಗೃತ ಕ್ರಮವಾಗಿ ಜ್ವರ ಪ್ರಕರಣಗಳನ್ನು ಶೀಘ್ರ ಪತ್ತೆ ಹಚ್ಚುವ ಅವಶ್ಯಕತೆ ಇರುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ದಿನಾಂಕ: 27.03.2020 ರಿಂದ ಜ್ವರ ತಪಾಸಣಾ ಶಿಬಿರಗಳನ್ನು ಏರ್ಪಡಿಸಲು ಹಾಗೂ ಆರೋಗ್ಯ ಸಂಸ್ಥೆಗಳಿಗೆ ಬರುವ ರೋಗಿಗಳನ್ನು ತಪಾಸಣೆಗೆ ಒಳಪಡಿಸಿ ಈ ಕೆಳಕಂಡ ಮಾನದಂಡಗಳನ್ವಯ ಸೂಚಿಸುವುದು.

1. ವಾರದ ಎಲ್ಲಾ ದಿನಗಳು (ಸರ್ಕಾರಿ ರಜೆಗಳನ್ನು ಒಳಗೊಂಡಂತೆ) ಜ್ವರ ತಪಾಸಣಾ ಶಿಬಿರಗಳನ್ನು ನಡೆಸುವುದು
2. ಆರೋಗ್ಯ ಸಂಸ್ಥೆಯ ಹೊರಾಂಗಣದಲ್ಲಿ / ತೆರೆದ ಸ್ಥಳದಲ್ಲಿ / ಪತ್ಯೇಕ ಕೊಠಡಿಯಲ್ಲಿ ಜ್ವರ ತಪಾಸಣಾ ಶಿಬಿರಗಳನ್ನು ನಡೆಸುವುದು.
3. ಜ್ವರ ತಪಾಸಣಾ ಶಿಬಿರಗಳನ್ನು ನಡೆಸಲು ಅವಶ್ಯ ಆರೋಗ್ಯ ಸಲಕರಣೆಗಳನ್ನು, ಸುರಕ್ಷಾ ಕವಚಗಳನ್ನು ಇತರೆ ಜ್ವರ ತಪಾಸಣಾ ಶಿಬಿರಗಳಲ್ಲಿ ಲಭ್ಯವಿರತಕ್ಕದ್ದು.
4. ಜ್ವರ ತಪಾಸಣಾ ಶಿಬಿರಗಳಿಗೆ ವೈದ್ಯಾಧಿಕಾರಿಗಳು ಹಾಗೂ ಶುಶ್ರೂಷಕಿ / ಹಿರಿಯ / ಕಿರಿಯ ಮಹಿಳಾ / ಪುರುಷ ಆರೋಗ್ಯ ಸಹಾಯಕರವರುಗಳನ್ನು ಒಳಗೊಂಡಂತೆ ತಂಡ ರಚಿಸಿಕೊಳ್ಳತಕ್ಕದ್ದು.
5. ಒಳ ಬರುವ ರೋಗಿಗಳು ಹಾಗೂ ಆರೋಗ್ಯ ಸಿಬ್ಬಂದಿಗಳಲ್ಲಿ ಕನಿಷ್ಠ 01 ಮೀಟರ್ ಅಂತರ ಇರುವುದನ್ನು ಖಚಿತಪಡಿಸುವುದು.
6. ಜ್ವರ ಪ್ರಕರಣಗಳನ್ನು ತಪಾಸಣೆ ನಡೆಸಿ ಕೋವಿಡ್-19 ರೋಗ ಲಕ್ಷಣಗಳು ಕಂಡು ಬಂದಲ್ಲಿ ಸುರಕ್ಷಾ ಕ್ರಮಗಳನ್ನು ವಹಿಸಿ ಮೇಲ್ದರ್ಜೆಯ ಆಸ್ಪತ್ರೆಗೆ ಸೂಕ್ತ ರೆಫರಲ್ ಮಾಡಿ ಸಂಬಂದಪಟ್ಟ ಆಸ್ಪತ್ರೆ ಆಡಳಿತಾ ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡುವುದು.
7. ರೋಗಿಯು ಉಪಯೋಗಿಸಿದ ಮಾಸ್ಕ್, ಗ್ಲೌಸ್‌ಗಳನ್ನು ಎಚ್ಚರಿಕೆಯಿಂದ ಬಯೋಮೆಡಿಕಲ್ ಗಣತಾಜ್ಯ ನಿರ್ವಹಣೆ ಕಾಯ್ದೆ ಅನ್ವಯ ವಿಲೇವಾರಿ ಮಾಡುವುದು.
8. ಜ್ವರ ತಪಾಸಣಾ ವರದಿಗಳನ್ನು ಕ್ರೋಢೀಕರಿಸಿ ತಾಲ್ಲೂಕು ಆರೋಗ್ಯಧಿಕಾರಿಗಳ ಮುಖಾಂತರ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಿಗೆ ಪ್ರತಿದಿನ ಸಂಜೆ 5.00 ಗಂಟೆಗೆ ಸಲ್ಲಿಸುವುದು.
9. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪ್ರತಿದಿನ ಸಂಜೆ 7.00 ಗಂಟೆಯ ಒಳಗೆ ಕ್ರೋಢೀಕರಿಸಿದ ವರದಿಯನ್ನು ನಿರ್ದೇಶನಾಲಯದ ಇ-ಮೇಲ್ **osdcovid19@gmail.com** ಗೆ ಸಲ್ಲಿಸುವುದು
10. ಜ್ವರ ತಪಾಸಣಾ ಶಿಬಿರಕ್ಕೆ ಅವಶ್ಯ ಸಾಮಾಗ್ರಿಗಳನ್ನು ಸಂಬಂದಪಟ್ಟ ಆರೋಗ್ಯ ಸಂಸ್ಥೆಯ ಮುಕ್ತ ನಿಧಿಯ ಅನುದಾನದಲ್ಲಿ ಭರಿಸತಕ್ಕದ್ದು.

ವರದಿಯ ನಮೂನೆಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ, ರೆಫರಲ್ ರಸೀದಿಗಳನ್ನು ಇದರೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ.

**ನಿರ್ದೇಶಕರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**
**ಬೆಂಗಳೂರು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
2. ಎಲ್ಲಾ ಜಿಲ್ಲಾ ಸರ್ವೇಕ್ಷಣ ಅಧಿಕಾರಿಗಳು

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
4. ಯೋಜನಾ ನಿರ್ದೇಶಕರು, (ಆರ್.ಸಿ.ಹೆಚ್. ಮತ್ತು ಐ.ಡಿ.ಎಸ್.ಪಿ.), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.